ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE :

# ಪುದುಚೇರಿಯ ಕಾಂಗ್ರೆಸ್ ನೇತೃತ್ವದ ಸರ್ಕಾರ ಪತನ

- **ದಕ್ಷಿಣ ಭಾರತದಲ್ಲಿದ್ದ ಏಕೈಕ ಕಾಂಗ್ರೆಸ್ ಸರ್ಕಾರ**
- **ವಿಶ್ವಾಸಮತಕ್ಕೂ ಮುನ್ನವೇ ಸಿಎಂ ರಾಜೀನಾಮೆ**

ಪುದುಚೇರಿ: ದಕ್ಷಿಣ ಭಾರತದಲ್ಲಿದ್ದ ಏಕೈಕ ಕಾಂಗ್ರೆಸ್ ಸರ್ಕಾರ ಎನ್ನಿಸಿಕೊಂಡಿದ್ದ ಪುದುಚೇರಿಯಲ್ಲಿನ ವಿ.ನಾರಾಯಣಸ್ವಾಮಿ ನೇತೃತ್ವದ ಸರ್ಕಾರ ಪತನವಾಗಿದೆ. ಶಾಸಕರ ರಾಜೀನಾಮೆಯಿಂದಾಗಿ ಅಲ್ಪಮತಕ್ಕೆ ಕುಸಿದಿದ್ದ ಸರ್ಕಾರ, ಸೋಮವಾರ ವಿಶ್ವಾಸ ಮತಕ್ಕೆ ಮುನ್ನವೇ ಪತನಗೊಂಡಿತು. ನೇರವಾಗಿ ಲೆ.ಗವರ್ನರ್ ತಮಿಳುಸಾಯಿ ಸೌಂದರರಾಜನ್‌ರನ್ನು ಭೇಟಿ ಮಾಡಿದ ನಾರಾಯಣಸ್ವಾಮಿ ಅವರು ರಾಜೀನಾಮೆ ಸಲ್ಲಿಸಿದರು.



ಒಂದೆರಡು ತಿಂಗಳಿನಲ್ಲಿ ಪುದುಚೇರಿಯಲ್ಲಿ ವಿಧಾನಸಭೆ ಚುನಾವಣೆ ನಡೆಯುವ ಸಾಧ್ಯತೆ ಇದೆ. ಹೀಗಾಗಿ, ಹೊಸ ಸರ್ಕಾರ ರಚನೆಯಾಗುವ ಸಾಧ್ಯತೆ ಕಡಿಮೆ. ಆದರೂ ಸರ್ಕಾರ ರಚಿಸುವ ಬಗ್ಗೆ ಹೈಕಮಾಂಡ್ ನಿರ್ಧಾರ ಮಾಡಲಿದೆ ಎಂದು ಬಿಜೆಪಿ ಹೇಳಿದೆ.

ವಿಚಿತ್ರವೆಂದರೆ, ನಾರಾಯಣಸ್ವಾಮಿ ಸರ್ಕಾರ ಬೀಳಲು ಕಿರಣ್ ಬೇಡಿ ಅವರು ನಾಮನಿರ್ದೇಶನ ಮಾಡಿದ್ದ ಮೂವರು ಬಿಜೆಪಿ ಶಾಸಕರೇ ಕಾರಣವಾದರು. ಇವರಿಗೆ ವೋಟಿಂಗ್ ಹಕ್ಕು ಕೊಡಬಾರದು ಎಂಬುದು ಸಿಎಂ ವಾದವಾಗಿತ್ತು. ಆದರೆ, ಹಿಂದೆ ಸುಪ್ರೀಂಕೋರ್ಟ್ ಇವರಿಗೂ ಮತದಾನದ ಹಕ್ಕಿದೆ ಎಂದಿದ್ದರಿಂದ ಕಡೇ ಕ್ಷಣದಲ್ಲಿ ನಾರಾಯಣಸ್ವಾಮಿಯವರು ಕೈಚೆಲ್ಲಿದರು. ಹೀಗಾಗಿ ಕೇವಲ 11 ಶಾಸಕರ ಬಲ ಹೊಂದಿದ್ದ ಸರ್ಕಾರ ಕುಸಿದುಬಿದ್ದಿತು.

ಇದರಿಂದಾಗಿ ದೇಶದಲ್ಲಿ ಪಂಜಾಬ್, ರಾಜಸ್ಥಾನ ಮತ್ತು ಛತ್ತೀಸ್‌ಗಡದಲ್ಲಿ ಮಾತ್ರ ಕಾಂಗ್ರೆಸ್ ಸ್ವತಂತ್ರವಾಗಿ ರಚಿಸಿರುವ ಸರ್ಕಾರವಿದೆ. ಮಹಾರಾಷ್ಟ್ರ ಸೇರಿದಂತೆ ಕೆಲವು ರಾಜ್ಯಗಳಲ್ಲಿ ಕಾಂಗ್ರೆಸ್ ಬೆಂಬಲ ನೀಡಿದೆ.